## **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4/23**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-4**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಾದೇವನಾಯಕ |
| ತಂದೆಯ/ ಗಂಡನ ಹೆಸರು | : | ಕರೀನಾಯಕ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹೊಸ ಬೀರಹಳ್ಳಿ |

**ದಿನಾಂಕ 18.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ಮತ್ತು 2 ಗೊತ್ತು. ದಿಃ30.06.2022 ರಂದು 12 ಗಂಟೆ ಸಮಯದಲ್ಲಿ ನಾನು ಹೋದಾಗ ಗಲಾಟೆ ನಡೆಯುತ್ತಿತ್ತು. ನಾನು ಹೋಗುವಷ್ಟರಲ್ಲಿ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ. ಸುಮಾರು 50 ಕಂಬಗಳನ್ನು ಆರೋಪಿತರು ಮುರಿದು ಹಾಕಿದ್ದರು. ಚಾಸಾ 1 ರವರ ಬಲ ಕೈಯಲ್ಲಿ ರಕ್ತ ಬರುತ್ತಿತ್ತು, ಚಾಸಾ 2 ರವರ ಭುಜಕ್ಕೆ ಗಾಯ ಆಗಿತ್ತು. ನಾನು ಮತ್ತು ಚಾಸಾ 3 ರವರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತೇವೆ. ನಂತರ ಚಾಸಾ 1 ಮತ್ತು 2 ರವರನ್ನು ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಗಲಾಟೆ ನಡೆದ ದಿನವೇ 5 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ಮಹಜರ ಮಾಡಿ ನನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ 2 ಕ್ಕೆ ನಾನು, ಚಾಸಾ

3 ಮತ್ತು 5 ಸಹಿ ಮಾಡಿರುತ್ತೇವೆ. ಸಾಕ್ಷಿ ಮುದ್ದೆಮಾಲು 1 ರಿಂದ 3 ನೋಡಿ ಗುರುತಿಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ನಿಪಿ 2 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

## ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸರ್ವೇ ನಂ 4 ರ ಜಮೀನಿಗೆ ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ಸುಮಾರು 30 ಸಾವಿರ ನಷ್ಟ ಉಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 1 ರವರು ಮಚ್ಚಿನಿಂದ ಚಾಸಾ 1 ರವರಿಗೆ ತಲೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 2 ರವರು ದೊಣ್ಣೆಯಿಂದ ಚಾಸಾ 2 ರವರಿಗೆ ಬಲ ಪಕ್ಕೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಆರೋಪಿತರು ಎಲ್ಲರೂ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

## ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾಸಾ 1 ಮತ್ತು 2 ನನ್ನ ಸೋದರ ಮಾವಂದಿರು ಎಂದರೆ ಸರಿ. ನಾನು ಜಮೀನು ಹತ್ತಿರ ಹೋದಾಗ 11.30-12 ಗಂಟೆ ಆಗಿತ್ತು. ಗಲಾಟೆಯನ್ನು ಯಾರು ಶುರು ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನಾನು ಹೋದಾಗ ಸುಮಾರು 10 ಜನ ಇದ್ದರು ಅವರ ಹೆಸರು ಗೊತ್ತಿಲ್ಲ. ಆರೋಪಿತರು ಮತ್ತು ನಮ್ಮಗಳನ್ನು ಹೊರತುಪಡಿಸಿ 8 ಜನ ಇದ್ದರು. ಸದರಿ ದಿನ ಯಾವುದೇ ಗಲಾಟೆ ಆಗಿಲ್ಲ, ನಾನು ಸಂಬಂಧಿಕನಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ 4-5 ಜನ ಇದ್ದರು. ಸದರಿ ಸಮಯದಲ್ಲಿ ನಾನು, ಚಾಸಾ 3, 5 ಇದ್ದೆವು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮಹಜರನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ಮುದ್ದೆಮಾಲುಗಳನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಪೊಲೀಸರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮುದ್ದೆಮಾಲುಗಳ ಮೇಲೆ ನನ್ನ ಸಹಿ ಪಡೆದಿರುವುದಿಲ್ಲ. ಸ್ಥಳದ ಪೋಟೋ ತೆಗೆದಿರುವುದಿಲ್ಲ. ಸದರಿ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**